ಉಪಾಧ್ಯಕ್ಷೀಣಿಯವರು:– ಈಗ ಅವರು ಉತ್ತರ ಕೊಡಲಿ.

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ಉಪಾಧ್ಯಕ್ಷೀಣಿಯವರೆ, ಮಾಜಿ ಆರೋಗ್ಯ ಸಚಿವರೇ ಅಲ್ಲಿ ಏನಾಗಿದೆಯೆಂದು ಹೇಳಿದ್ದರಿಂದ ಅದು ನಿಜವೇ ಆಗಿರುತ್ತದೆಯೇ ಹೊರತು ಅದು ನಿಜ ಆಗದೇ ಇರಲಿಕ್ಕೆ ಸಾಧ್ಯವಿಲ್ಲ. ಆಮೇಲೆ 1990–91ನೇ ಇಸವಿಯಲ್ಲಿ ತಾವು ಹೇಳಿದ್ದಂಥಾದ್ದನ್ನು ಮಂಜೂರು ಮಾಡಿದ್ದು ನಿಜ. ಆ ವರ್ಷ ಅದು 50 ಪಿ.ಹೆಚ್.ಸಿ. ಜಾಸ್ತಿ ಆಯಿತೆಂದು ಜಾರಿಗೊಳಿಸಲಿಲ್ಲ. ಅದನ್ನು ತಕ್ಷಣ ಜಾರಿಗೊಳಿಸಿ ಮಂಜೂರು ಮಾಡುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ:– ಇನ್ನೊಂದು ಉಪಪ್ರಶ್ನೆ ಇದೆ.

ಉಪಾಧ್ಯಕ್ಷೀಣಿಯವರು:– ಹರ್ಷಕುಮಾರ್ ಗೌಡ ಅವರು.

ಶ್ರೀ ಕೆ.ಹೆಚ್. ಹನುಮೇಗೌಡ:– ಮಾನ್ಯ ಅಧ್ಯಕ್ಷೀಣಿಯವರೇ, ಮಾನ್ಯ ಮುಖ್ಯಮಂತ್ರಿಯವರು ಮಂಜೂರು ಮಾಡುತ್ತೇವೆ ಎಂದು ಹೇಳಿದರು. ಆದರೆ ಇದು ವಿಳಂಬ ಏತಕ್ಕಾಗಿ ಆಯಿತು....

(ಗೊಂದಲ)

ಉಪಾಧ್ಯಕ್ಷೀಣಿಯವರು:– ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆ. ದಯಮಾಡಿ ಕುಳಿತುಕೊಳ್ಳಿ.

ನಿರುದ್ಯೋಗ ಸಿ.ಪಿ.ಎಡ್. ಅಭ್ಯರ್ಥಿಗಳು

(05) ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ)

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸಿಪಿಇಡಿ ತೇರ್ಗಡೆ ಹೊಂದಿ ನೌಕರಿ ಸಿಗದೆ ಪರದಾಡುತ್ತಿರುವ ಅಭ್ಯರ್ಥಿಗಳಿಗೆ ಉದ್ಯೋಗ ಒದಗಿಸುವಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?
ಆ) ಈಗ ಸರ್ಕಾರವು ಕರೆದಿರುವ ಉಪಾಧ್ಯಾಯರ ಸಂದರ್ಶನದ ಜೊತೆಗೆ ಸಿಪಿಇಡಿ ಅಭ್ಯರ್ಥಿಗಳ ಸಂದರ್ಶನವನ್ನು ಕರೆಯಲು ಉದ್ದೇಶಿಸಲಾಗಿದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು)

ಅ) ಕಾಲಕಾಲಕ್ಕೆ ಉದ್ಭವವಾಗುವ ಹುದ್ದೆಗಳಿಗೆ ನಿಯಮಾನುಸಾರ ದೈಹಿಕ ಶಿಕ್ಷಕರನ್ನು ಭರ್ತಿ ಮಾಡಲಾಗುವುದು.
ಆ) ವಿಶೇಷ ನೇಮಕಾತಿ ನಿಯಮಗಳನ್ನು ಹೊರಡಿಸಲಾಗಿದ್ದು, ಅದರಂತೆ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಸ್.ಎಂ. ಯಾಹ್ಯ:– ಮಾನ್ಯ ಉಪಾಧ್ಯಕ್ಷೀಣಿಯವರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಪ್ರಶ್ನೆ ಕ್ರಮಾಂಕ 25 (5) ಕ್ಕೆ ಉತ್ತರವನ್ನು ಒದಗಿಸಿದ್ದೇನೆ.

ಶ್ರೀ ಕೆ. ಹರ್ಷಕುಮಾರ್‌ಗೌಡ:– ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಸಹಸ್ರಾರು ಜನ ಯುವಕರು ದೈಹಿಕ ಶಿಕ್ಷಣದಲ್ಲಿ ತರಬೇತಿ ಹೊಂದಿದ್ದರೂ ಉದ್ಯೋಗವಿಲ್ಲದೆ ಸಂಕಷ್ಟಕ್ಕೊಳಗಾಗಿದ್ದಾರೆ. ಮಾನ್ಯ ಸಚಿವರು ನನ್ನ 'ಅ' ಪ್ರಶ್ನೆಗೆ ಉತ್ತರಿಸುತ್ತಾ ಕಾಲಕಾಲಕ್ಕೆ ಉದ್ಭವವಾಗುವ ಹುದ್ದೆಗಳಿಗೆ ನಿಯಮಾನುಸಾರ ದೈಹಿಕ ಶಿಕ್ಷಕರನ್ನು ಭರ್ತಿ ಮಾಡಲಾಗುವುದು ಎಂದು ತಿಳಿಸಿದ್ದಾರೆ. ತಾವುಗಳು ಹೇಳಿದಂತೆ, ಭರ್ತಿ ಮಾಡುವಲ್ಲಿ ಯಾವ ಮಾನದಂಡವನ್ನು ಅಳತೆಗೋಲನ್ನು ಇಟ್ಟುಕೊಂಡು ಖಾಲಿ

ಹುದ್ದೆಗಳನ್ನು ಭರ್ತಿ ಮಾಡಲು ಉದ್ದೇಶಿಸಿದ್ದೀರಿ ಎನ್ನುವುದನ್ನು ದಯವಿಟ್ಟು ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಯಾಹ್ಯ:– ಮಾನ್ಯ ಅಧ್ಯಕ್ಷಣಿಯವರೇ, ಈಗ ಸರ್ಕಾರದಿಂದ ಈ ವಿಚಾರವಾಗಿ ಪ್ರಾಮುಖ್ಯವಾಗಿ ವಿಶೇಷ ನೇಮಕಾತಿ ನಿಯಮಗಳನ್ನು ಹೊರಡಿಸಲಾಗಿದೆ. It has already been decided on certain basic issues on this point. There are 681 posts of physical instructors vacant and the Government has taken a decision to post one physical instructor for each upper primary school. The draft rules have been framed in this regard and recently the Cabinet has given its approval. The draft rules have been notifed in the Gazzette on 24–12–1992 calling for objections and suggestions. 24th of January next year is the last date. There onwards the Governemt will act very fast in this matter. The process will start from the next academic year and all the vacancies will be filled up.

ಶ್ರೀ ಕೆ. ಹರ್ಷಕುಮಾರ್‌ಗೌಡ:– ಮಾನ್ಯ ಅಧ್ಯಕ್ಷಣಿಯವರೇ, ಕಳೆದ ವರ್ಷಗಳಲ್ಲಿ ಎಷ್ಟು ಜನ ದೈಹಿಕ ಶಿಕ್ಷಕರುಗಳನ್ನು ಸರ್ಕಾರದವರು ನೇಮಕ ಮಾಡಿಕೊಂಡಿದ್ದಾರೆ ? ಹಾಗೆಯೇ ರಾಜ್ಯದಲ್ಲಿ ದೈಹಿಕ ಶಿಕ್ಷಣ ತರಬೇತಿ ಶಾಲೆಗಳು ಏನು ಇವೆ, ಅವುಗಳನ್ನು ಮುಚ್ಚುವ ಉದ್ದೇಶ ಏನಾದರೂ ಸರ್ಕಾರದ ಮುಂದೆ ಇದೆಯೇ ?

ಶ್ರೀ ಎಸ್.ಎಂ. ಯಾಹ್ಯ:– ಮಾನ್ಯ ಸದಸ್ಯರು ಹೇಳುವ ಪ್ರಶ್ನೆ ಇಲ್ಲಿ ಉದ್ಭವಿಸುವದಿಲ್ಲ. ಸರಕಾರದವರು ಅಪ್ಪರ್ ಪ್ರೈಮರಿ ಸ್ಕೂಲ್‌ಗಳಿಗೆ ಒಬ್ಬ ದೈಹಿಕ ಶಿಕ್ಷಕರನ್ನಾದರೂ ನೇಮಕ ಮಾಡ ಬೇಕೆಂದಿದ್ದೇವೆ. ಅದಕ್ಕೆ ಬೇಕಾದಂಥ ನೋಟಿಫಿಕೇಷನ್ ಕೊಟ್ಟಿದ್ದೇವೆ. ಸಚಿವ ಸಂಪುಟವು ಕೂಡ ಅದಕ್ಕೆ ಅಪ್ರೂವಲ್ ಕೊಟ್ಟಿದೆ. ಖಾಲಿ ಹುದ್ದೆಗಳನ್ನು ನೋಡಿಕೊಂಡು ಬರುವ ಶೈಕ್ಷಣಿಕ ವರ್ಷದಿಂದ ನೇಮಕಾತಿ ಮಾಡುವ ಹಾಗೆ ಮಾಡುತ್ತೇವೆ.

ಶ್ರೀ ಕೆ. ಹರ್ಷಕುಮಾರ್‌ಗೌಡ:– ನಾನು ಮಾನ್ಯ ಸಚಿವರಲ್ಲಿ ಈ ವರ್ಷದಲ್ಲಿ ಎಷ್ಟು ಜನ ದೈಹಿಕ ಶಿಕ್ಷಕರನ್ನು ನೇಮಕಾತಿ ಮಾಡಿಕೊಂಡಿದ್ದೀರಿ ಎಂದು ಕೇಳಿದ್ದೇನೆ. ಅದಕ್ಕೆ ಉತ್ತರ ಕೊಡುತ್ತಿಲ್ಲ. ಮಾನ್ಯ ಸಚಿವರು ನೇಮಕಾತಿಗಾಗಿ ವಿಶೇಷ ನೇಮಕಾತಿ ನಿಯಮಗಳನ್ನು ಮಾಡಿದ್ದೇವೆ, ಪಾಲಿಸಿ ಡಿಸಿಶನ್ ತೆಗೆದುಕೊಂಡಿದ್ದೇವೆ. ಗೆಜೆಟ್ ನೋಟಿಫಿಕೇಷನ್ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ದಯಮಾಡಿ ಒಟ್ಟು ಎಷ್ಟು ದೈಹಿಕ ಶಿಕ್ಷಕರನ್ನು ನೇಮಕ ಮಾಡಿಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಯಾಹ್ಯ:– ನಾವು ದೈಹಿಕ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವಲ್ಲಿ ಸ್ಪೆಶಲ್ ರಿಕ್ರೂಟ್‌ಮೆಂಟ್ ಮಾಡುತ್ತೇವೆಂದು ಹೇಳಿದ್ದೇವೆ. ಮೊದಲು ಆಗಲಿಲ್ಲ ಅದಕ್ಕಾಗಿ ಈಗ ಬೇಗ ಮಾಡಲಿಕ್ಕೆ ನಾವು ಸಿದ್ಧಾಂತವೆಲ್ಲ ಮಾಡುತ್ತಿದ್ದೇವೆ. ಅದನ್ನು ತಾವುಗಳು ಅಪ್ರೀಶಿಯೇಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.

ಮೂಡಬಿದರೆಯ ವಿದ್ಯುತ್ ಉಪಕೇಂದ್ರ

(280) ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?